ಪೂಜೆಗಂತಲೇ ಬಂದು ಪ್ರಸಾದ ನಿರಾಕರಿಸಿದ ಪಾತಿಚಿಕ್ಕಿಯ ಮೇಲೆ ಸಣ್ಣ ಅಸಹನೆಯೂ, ಎಲ್ಲರೆದುರು ನನಗೆ ಸಣ್ಣ ಮುಜುಗರವೂ ಆಗಿತ್ತು.

ಮಂಚಿಕೇರಿಯೆಂಬ ಊರವರಿಗೇನೋ ಇವಳು ಆದರ್ಶವೇ. ಆದರೆ ಊರಿನಿಂದ ಈಚೆ ಬಂದರೂ ಪಾತಿಚಿಕ್ಕಿ ಅದೇ ಗೋಲದೊಳಗೆ ಮಿಡುಕುತ್ತಿದ್ದಾಳೆ ಎನ್ನಿಸಿತು.

ತಾನು ಪ್ರಸಾದ ನಿರಾಕರಿಸುವುದಕ್ಕೂ ಆದರ್ಶಕ್ಕೂ ಎತ್ತಣಿಂದೆತ್ತ ಸಂಬಂಧವೂ ಇಲ್ಲವೆಂದು ಮಂಗನ ಹಾವಳಿಯ ಸುದ್ದಿ ಬಂದಾಗಲೊಮ್ಮೆ ಏನೋ ಕತೆ ತೆಗೆದು ಅವಳೇ ಹೇಳಿದ್ದಳು, ಬಿಡಿಸಿ ಅರ್ಥವಾಗುವಂತೆ ಹೇಳಿದ್ದಳೋ ಇಲ್ಲವೋ ನೆನಪಿಲ್ಲ. ಆದನ್ನೆಲ್ಲಾ ನಾನು ತೀರಾ ತಲೆಗೆ ಹಚ್ಚಿಕೊಂಡು ಕೇಳಿರಲಿಲ್ಲ. ಅವಳ ಆದರ್ಶಗಳಿಗೆ ಮೂಲ ಹುಡುಕುವುದೆಂದರೆ ನನಗೆ ಆಗಿಬರದ ಕೆಲಸ.

ಪ್ರಸಾದ ನಿರಾಕರಿಸುವುದಕ್ಕೆ ಕಾರಣ ಏನೇ ಇರಲಿ, ಅದನ್ನು ನಜರಂದಾಜು ಮಾಡಿ ಪಾತಿಚಿಕ್ಕಿಯನ್ನು ದೈವತ್ವಕ್ಕೇರಿಸುವ ಪ್ರಯತ್ನ ಊರ ಮಂದಿಯೇ ಮಾಡಿದ್ದು. ಊರಮಂದಿಯದೂ ತಪ್ಪಿಲ್ಲ ಬಿಡಿ, ಜೀವನದಲ್ಲಿ ಎದುರಾಗುವ ಸಾವಿರಾರು ಕಷ್ಟ ಕಾರ್ಪಣ್ಯಗಳಿಗೆ ಮಾತನಾಡದ ದೇವರುಗಳಿಗಿಂತ ಒರಟೊರಟಾಗಿ ಮಾತನಾಡಿ, ಎಲ್ಲರ ನಂಬಿಕೆಯನ್ನೇ ಅಲ್ಲಾಡಿಸುವಂತೆ ಚೆಂದಾಗಿಯೇ ಬದುಕುತ್ತಿದ್ದ ಪಾತಿಚಿಕ್ಕಿ ಊರವರಿಗೆ ಭಿನ್ನವಾಗಿಯೂ ಆಕರ್ಷಕವಾಗಿಯೂ ಕಾಣಿಸಿದ್ದಿರಬೇಕು. ಊರಿನ ಕೆಲವರು ಅವಳನ್ನು ಅಮ್ಮ ಎಂದು ಕರೆದರೆ ಎಲ್ಲರೂ ಅವಳನ್ನು ಅಮ್ಮ ಎನ್ನಲು ಶುರುಮಾಡಿದರು. ಮಗುವಿನ ನಾಮಕರಣಕ್ಕೆ ಕರೆದು ಹೆಸರೇನಿಡಲಿ ಎಂದು ಕೇಳಿದರು. ಮಗುವಿಗೆ ಸಿಹಿ ನೀನೇ ಮೊದಲು ತಿನ್ನಿಸೆಂದರು. ಕಡೆಕಡೆಗಂತೂ ಸಾಯಲು ಬಿದ್ದವರ ಬಾಯಿಗೆ ಗಂಗೆ ಹನಿಸಲೂ ಪಾತಿಚಿಕ್ಕಿಯೇ ಆಗಬೇಕಿತ್ತು ಊರಿನವರಿಗೆ.

> **ಪಾತಿಚಿಕ್ಕಿ ಚಿಟಬಿಲ್ಲನ್ನು ಹೆದೆಗೇರಿಸಿ ಮಂಗಗಳ ಬೇಟೆಯಾಡಲು ತೋಟಕ್ಕೆ ಹೋಗಿದ್ದರೆ ಇತ್ತ ಕಾಕಾ ತನ್ನಪ್ಪನ ಮನೆಯಿಂದ ತಂದ ಹಡಪ ತುಂಬಿದ ಟ್ರಂಕನ್ನೂ ತೆಗೆದುಕೊಳ್ಳದೆ ಬರೀಗೈಲಿ ಹೊರಟುಬಿಟ್ಟಿದ್ದ.**

ಬಲವಂತಕ್ಕೆ ಬಿದ್ದು ಊರ ಜನರಿಗೆ ದೇವರಂತಾದರೂ ಅವಳು ಮನುಷ್ಯತ್ವ ಮೀರಲು ಎಂದೂ ಹೆಣಗಿದ್ದಿಲ್ಲ, ದೇವರಾದೆನೆಂದು ಬದಲಾಗಿದ್ದಿಲ್ಲ. ಮೊದಲಿನಿಂದಲೂ ಕೇಳಿಕೊಂಡು ಮನೆಬಾಗಿಲಿಗೆ ಬಂದ ಎಲ್ಲರಿಗೂ ಕೈಮೀರಿ ಸಹಾಯ ಮಾಡಿಕೊಂಡು, ಒಂದಿಷ್ಟು ತಾನೇ ಸಿದ್ಧಪಡಿಸಿ ಅನುಷ್ಠಾನಕ್ಕೆ ತಂದುಕೊಂಡಿದ್ದ ನೀತಿ, ನಿಯಮ, ಶಿಸ್ತು ಎಂದುಕೊಂಡು ಬದುಕುತ್ತ ಬಂದವಳು. ವಯಸ್ಸೇರುತ್ತಾ ಆಯಸ್ಸಿಳಿಯುತ್ತಾ ದರೆಯ ಮೇಲಿನ ಮರದಂತೆ ಯಾವ ದೊಡ್ಡ ಗಾಳಿ ತಗಲಿದರೂ ನೆಲ ಪಾಲಾಗುವ ಹಾಗಾದರೂ ಅವಳು ಸ್ವಲ್ಪ ಕೂಡ ಬದಲಾಗದೆ ಅವಳಾಗಿಯೇ ಇದ್ದಂತಹ ಗಟ್ಟಿಗಿತ್ತಿ ಹೆಂಗಸು ಪಾತಿಚಿಕ್ಕಿ.

ಅದೇನಾಯಿತೋ ಏನೋ ಬೆಳಗಾಗುತ್ತಲೇ ನನಗೆ ಫೋನಾಯಿಸಿ, 'ಸಾಯುತ್ತೇನೆ ಎಂದರೆ ಅಳುವವರಿಗೇನೂ ಇಲ್ಲಿ ಕಮ್ಮಿಯಿಲ್ಲ ಕಮಲಿ... ಆದರೆ ಈ ಊರಲ್ಲಿ ಸಾಯಲು ಮುದ್ದಾಂ ಮನಸ್ಸಿಲ್ಲ ನನಗೆ. ನಾನಿಲ್ಲಿ ಸತ್ತರೆ ನನ್ನದೂ ಒಂದು ದೇವಸ್ಥಾನವಾಗಿಬಿಡಬಹುದು. ಹರಕೆ, ಬಲಿ ಅಂತ ಜಾತ್ರೆಗಿಂತ ಜನರೇ ಒಂದು ಶಿದ್ದೆ ಹೆಚ್ಚು ಮರುಳೆನಿಸಬಹುದು. ಇಂದಲ್ಲಾ ನಾಳೆ ಉಸಿರು ನಿಲ್ಲುವುದ್ದಿದ್ದೇ. ಅದು ಮತ್ತೆಲ್ಲೇ ಆದರೂ ಚಿಂತೆಯಿಲ್ಲ ನನಗೆ. ಉದ್ದೇಶವಿಲ್ಲದ ಈ ಬದುಕಿಗೊಂದು ಹೊಸ ಆಯಾಮವನ್ನು ಆ ಭಗವಂತನೇ ತೋರಿಸಿದನೆಂದುಕೋ! ಏನು ಎತ್ತ ಎಂದು ಫೋನಿನಲ್ಲೆಲ್ಲಾ